ದೂರದಲ್ಲಿದ್ದು, ಈ ಕಾರ್ಖಾನೆಯು Improved Technology and High Effficiency Technology ಪ್ರಕಾರ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಪರಿಸರ ಮಾಲಿನ್ಯವಾಗುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಕಾರ್ಖಾನೆಯವರು ತಿಳಿಸಿದ್ದಾರೆಂದು ಕಬ್ಬು ಅಭಿವೃದ್ಧಿ ಆಯುಕ್ತರು ತಿಳಿಸಿದ್ದಾರೆ.

ಆದುದರಿಂದ, ಮೇ: ರೇಣುಕಾ ಸಕ್ಕರೆ ಕಾರ್ಖಾನೆಯವರು ಅಫಜಲಪುರ ತಾಲ್ಲೂಕಿನ ಹವಳಗಾ ಗ್ರಾಮದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಹಣ ಹೂಡಿಕೆಗಾಗಿ, ದಿನಾಂಕ: 24–3–2006ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಗಿದ್ದರೂ, ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಸರ್ಕಾರದ ತಾತ್ವಿಕ ಅನುಮೋದನೆ ಕೋರಿ ಸಲ್ಲಿಸಿರುವ ಅವರ ಮನವಿಯನ್ನು ರಾಜ್ಯ ಸರ್ಕಾರದ ನೀತಿಯನ್ವಯ ಹಾಗೂ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು : ಮಾಧುಸ್ವಾಮಿಯವರೆ, ಅದೇನೋ ಕೇಳುತ್ತೇನೆಂದು ಹೇಳಿದ್ದಿರಲ್ಲ, ಕೇಳಿ.

10. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಸಿಎಲ್ (l) ನ್ನು ರದ್ದು ಮಾಡುವುದರಿಂದ ಹೋಲ್‌ಸೇಲ್ ಲಿಕ್ಕರ್ ಮಾರಾಟಗಾರರಲ್ಲಿ ಕೆಲಸ ಮಾಡುವ ನೌಕರರು ನಿರುದ್ಯೋಗಿಗಳಾಗುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಿಎಲ್ (l)ಅನ್ನು ಏನು ನೀವು ರದ್ದು ಮಾಡುತ್ತೇವೆಂದು ಬಡ್ಜೆಟ್‌ನಲ್ಲಿ ಓದಿದ್ದೀರಿ. ಅದರಿಂದ ಸಾವಿರಾರು ಜನರಿಗೆ ಉದ್ಯೋಗವಿಲ್ಲದ ಹಾಗಾಗುತ್ತದೆ. ಅವರೇನು ಹೋಲ್‌ಸೇಲ್‌ನಲ್ಲಿ ಲಿಕ್ಕರ್ ಅನ್ನು ಮಾರಿಕೊಂಡು ಇದ್ದರು ರೀಟೇಲರ್ಸ್ ಅವರ ಹತ್ತಿರ ಸಾಲ ತೆಗೆದುಕೊಂಡು ಹೋಗಿ ಮಾರುವುದು, ಆಮೇಲೆ ವಾಪಸ್ಸು ಕೊಡುವುದು ಹೀಗೆ ಮಾಡುತ್ತಿದ್ದರು. ಈಗ ರೀಟೇಲರ್ಸ್‌ಗೂ ತೊಂದರೆಯಾಗಿದೆ. ಹೋಲ್‌ಸೇಲ್ ಏನು ನಡೆಯುತ್ತಿತ್ತು ಅದರ ಪಾಡಿಗೆ ಇದು ನಡೆಯಲಿ. ನೀವು ಇಲ್ಲಿ ನಿಗಮದಿಂದ ಕೊಡುವುದನ್ನು ನಿಗಮದಿಂದ ಕೊಟ್ಟುಬಿಡಿ. ಹೋಲ್‌ಸೇಲ್‌ಗಳನ್ನು ಮುಂದುವರಿಸಲಿಕ್ಕೆ ನಾವಿಲ್ಲಿ ಒತ್ತಾಯ ಮಾಡಿದ್ದೆವು. ಸನ್ಮಾನ್ಯ ಯಡಿಯೂರಪ್ಪನವರು ಈ ಫ್ಲೋರ್‌ನಲ್ಲಿ ಒಪ್ಪಿದ್ದರು. ಈವರೆಗೆ ಅವರಿಂದ ಪ್ರಕಟಣೆ ಬಂದಿಲ್ಲ. ಸರ್ಕಾರದ ತೀರ್ಮಾನ ಆಚೆ ಬಂದಿಲ್ಲ. ತಾವು ಸನ್ಮಾನ್ಯ ಮುಖ್ಯಮಂತ್ರಿಗಳು ಅದನ್ನು ಮುಂದುವರಿಸುತ್ತೀರೋ? ಹೇಗೆ? ಎಂದು ಹೇಳಿ ಈ ಸಭೆಗೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಒಂದು ವರ್ಷವಾದರೂ ಮುಂದುವರಿಸಲಿ. ಏಕೆಂದರೆ ಅನೇಕ ಜನ ನಿರುದ್ಯೋಗಿಗಳಾಗುತ್ತಾರೆ. ಅವರು ಬೇರೆ ಬೇರೆ ಕೆಲಸ ಪಡೆಯುವವರೆಗೆ ಒಂದು ವರ್ಷವಾದರೂ ಮುಂದುವರಿಸುವುದು ಒಳ್ಳೆಯದು.

ಶ್ರೀ ಎಂ.ಪಿ. ವೆಂಕಟೇಶ್ : ಬಹಳ ಜನ ಬೀದಿ ಪಾಲಾಗುತ್ತಾರೆ. ಬಹಳ ಜನರಿಗೆ ತೊಂದರೆಯಾಗುತ್ತದೆ. ಹಿಂದಿನ ಸರ್ಕಾರ ಮುಂದುವರಿಸಿತ್ತು. ಈಗಲೂ ಒಂದು ವರ್ಷ ಮುಂದುವರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಹಳೆಯ ಪದ್ಧತಿಯೇನಿತ್ತು ಅದನ್ನು ಮುಂದುವರಿಸಲಿ. ಇಲ್ಲದೇ ಹೋದರೆ 10 ಸಾವಿರ ಜನ ಕೆಲಸಗಾರರು ಬೀದಿಗೆ ಬರುತ್ತಾರೆ. ಅವರು ಅಷ್ಟೂ ಜನ ಕೆಲಸಗಾರರು ಬಹಳ ತೊಂದರೆಗೊಳಗಾಗುತ್ತಾರೆ. ಇದನ್ನು ಸರ್ಕಾರ ಸಾವಧಾನವಾಗಿ, ಬಹಳ ಗಂಭೀರವಾಗಿ ಪರಿಗಣಿಸಬೇಕು. ಅದನ್ನು ಹೀಗೇ ಮುಂದುವರಿಸಬೇಕಾದ ಅವಶ್ಯಕತೆಯಿದೆ. ಅದನ್ನು ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಕಡೇ ಪಕ್ಷ ಒಂದು ವರ್ಷ ಮುಂದುವರಿಸಿದರೆ ಅವರು ಬೇರೆ ಬೇರೆ ಕೆಲಸಗಳನ್ನು ನೋಡಿಕೊಳ್ಳುತ್ತಾರೆ. ಅವರು ಬೀದಿಗೆ ಬರುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬಾರದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದನ್ನು ದಯವಿಟ್ಟು ಮುಂದುವರಿಸಲಿ.

ಶ್ರೀ ಎಂ.ಪಿ. ವೆಂಕಟೇಶ್ : ಯಾರೋ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ : ನಾನು ನಿನ್ನೆ ಮಾತನಾಡಿದ್ದೆ. ಮಾತನಾಡಿದ ಮೇಲೆ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಕಮಿಟ್ ಮಾಡಿಕೊಂಡರು. ನಿಮ್ಮನ್ನು ಕೇಳಿದರು, ಆಗಬಹುದು, ಆಯಿತು ಎಂದು ಫ್ಲೋರ್‌ನಲ್ಲಿ ಹೇಳಿದರು. ನಿಮ್ಮನ್ನು ಕೇಳಿದರು. ಅದನ್ನು ಪ್ರಕಟಣೆ ಮಾಡಲಿಕ್ಕೂ ಕೂಡ ಆಗಲಿಲ್ಲ. ನಿಮ್ಮ ಹತ್ತಿರ ನೋಡಿ, ಏನು ಮಾಡುವುದು ಎಂದು ಕೇಳಿದರು. ಆಯಿತು, ಮುಂದುವರಿಸಿಕೊಂಡು ಹೋಗಲಿ ಎಂದು ಮುಖ್ಯಮಂತ್ರಿಗಳು ಹೇಳಿದರು. ಏಕೆಂದರೆ, ಸುಮಾರು 10 ಸಾವಿರ ಜನರಿಗೆ ಎಂಪ್ಲಾಯ್‌ಮೆಂಟ್ ಕೊಟ್ಟ ಹಾಗಾಗುತ್ತದೆ. ಇದನ್ನು ನೀವು ಸ್ವಲ್ಪ ಯೋಚನೆ ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಹೋಲ್‌ಸೇಲ್ ಮಾರಾಟಗಾರರ ವಿಷಯದಲ್ಲಿ ಸರ್ಕಾರವೇನು ಈ ಒಂದು ಪ್ರತೀತಿಯನ್ನು ತೆಗೆದು ಹಾಕಬೇಕೆಂದು ಹೇಳಿ ಬಡ್ಜೆಟ್‌ನಲ್ಲಿ ಘೋಷಣೆ ಮಾಡಿತ್ತು. ಸದಸ್ಯರು ಈ ವಿಷಯದಲ್ಲಿ ಆರ್ಥಿಕ ಸಚಿವರ ಗಮನವನ್ನು ಸೆಳೆದು ಮತ್ತೆ ಆ ವಿಷಯದಲ್ಲಿ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಇದರ ಬಗ್ಗೆ ಸರ್ಕಾರ ಒಂದು ಪ್ರಕಟಣೆ ಮಾಡಬೇಕೆಂದು ಏನು ಹೇಳುತ್ತಿದ್ದಾರೆ. ಈ ವಿಷಯದಲ್ಲಿ ನಾನು ನಿನ್ನೆಯೂ ಚರ್ಚೆ ಮಾಡಿದೆ. ಆರ್ಥಿಕ ಇಲಾಖೆಯ ಅಧಿಕಾರಿಗಳ ಜೊತೆ ಸನ್ಮಾನ್ಯ ಹಣಕಾಸಿನ ಸಚಿವರು ಚರ್ಚೆ ಮಾಡಿ ಇದು ಮಾಡತಕ್ಕಂಥದ್ದು ಸೂಕ್ತವಲ್ಲವೆಂದು ನಿರ್ಧಾರಕ್ಕೆ ಏನೋ ಬಂದಿದ್ದಾರೆ. ಆದರೆ, ಇವತ್ತೇನು ಸದನದ ಎಲ್ಲಾ ಸದಸ್ಯರುಗಳು ಒತ್ತಾಯ ಮಾಡುತ್ತಿದ್ದಾರೆ.....

ಶ್ರೀ ಎಸ್. ರಾಜೇಂದ್ರನ್ : ಏಕೆಂದರೆ, ಲಾಟರಿ ಇಲಾಖೆಯನ್ನು ಕ್ಲೋಸ್ ಮಾಡುವಾಗ ಅಲ್ಲಿ ಎಂಪ್ಲಾಯೀಸ್ ಇರಲಿಲ್ಲವೇ? ಅದನ್ನು ಕ್ಲೋಸ್ ಮಾಡಿಲ್ಲವೇ? ನಾನು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : 7–8 ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಅವರು ಏಕ್‌ದಂ ಬೀದಿಗೆ ಬರುವುದು ಬೇಡ. ಸರ್ಕಾರ ದಯವಿಟ್ಟು ತೀವ್ರವಾಗಿ ಗಮನ ಹರಿಸಬೇಕು.

ಶ್ರೀ ಎಸ್. ರಾಜೇಂದ್ರನ್ : ನಾನು ಒಪ್ಪಿಕೊಂಡಿಲ್ಲ. ಎಲ್ಲ ಸದಸ್ಯರೂ ಅಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಬಹುತೇಕ ಸದಸ್ಯರು, ಎಲ್ಲ ಸದಸ್ಯರೂ ಅಲ್ಲ.

ಶ್ರೀ ಹೆಚ್. ಆಂಜನೇಯ : ಆ ಕೆಲಸಗಾರನ ಹಿತದೃಷ್ಟಿಯಿಂದ ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಎ.ಟಿ. ರಾಮಸ್ವಾಮಿ : ಅದನ್ನು ರದ್ದು ಮಾಡುವುದರಿಂದ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿ ಲಾಭ ಬರುವುದಿದ್ದರೆ, ಅವರಿಗೆ ಬೇರೆ ಉದ್ಯೋಗವನ್ನು ಕೊಡಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಸಗಟು ಮಾರಾಟಗಾರರ ಈ ನಿರುದ್ಯೋಗದ ವಿಷಯದಲ್ಲಿ ಉದ್ಯೋಗದಿಂದ ಕೆಲಸಗಾರರು ವಂಚಿತರಾಗುತ್ತಾರೆ ಎಂದು ವಾದ ಮಾಡುತ್ತಿದ್ದಾರೆ. ಆದರೆ, ಮತ್ತೆ ನಾವು ಅವರಿಗೆ ಅವಕಾಶವನ್ನು ಕೊಟ್ಟರೆ ಆರ್ಥಿಕವಾಗಿ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆ ಮಾತುಗಳನ್ನು ಅಧಿಕಾರಿಗಳು ಏನು ಹೇಳುತ್ತಿದ್ದಾರೆ, ಈ ವಿಷಯದಲ್ಲಿ ಇವತ್ತು ಏನು ಸದನದ ಸದಸ್ಯರು ಕೇಳಿದ್ದೀರಿ. ನಾನು ಮತ್ತೊಮ್ಮೆ ಆರ್ಥಿಕ ಸಚಿವರ ಜೊತೆ ಚರ್ಚೆ ಮಾಡುತ್ತೇನೆ ಮತ್ತು ಅಲ್ಲಿ ಕೆಲಸ ಮಾಡತಕ್ಕಂಥ ಕೆಲಸಗಾರರು ಇವತ್ತೇನು ಉದ್ಯೋಗದಿಂದ ವಂಚಿತ ರಾಗುತ್ತಾರೆನ್ನುವ ಮಾತನ್ನು ತಾವೇನು ಹೇಳುತ್ತಿದ್ದೀರಿ, ಅವರ ಜೊತೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಏಕೆಂದರೆ, ಅರ್ಥ ಸಚಿವರು ಇವತ್ತು ಸದನದಲ್ಲಿ ಇಲ್ಲದಿರುವುದರಿಂದ, ತಾವೇನು ಇದರ ಬಗ್ಗೆ ಗಮನವನ್ನು ಸೆಳೆದಿದ್ದೀರಿ, ಇದಕ್ಕೆ ನಾನು ಉತ್ತರ ಹೇಳಲಿಕ್ಕೆ ಕಷ್ಟವಾಗುತ್ತದೆ. ಆದರೆ, ಈ ವಿಷಯದಲ್ಲಿ ಸಹಾನುಭೂತಿಯಿಂದ ಪರಿಶೀಲಿಸಿ ಇವತ್ತು ಆ ಕೆಲಸಗಾರರು ಜೀವನ ಮಾಡಲಿಕ್ಕೆ ಕಷ್ಟವಾಗುತ್ತದೆ ಎಂದೇನು ತಾವು ಹೇಳಿದ್ದೀರಿ, ಅದರ ಬಗ್ಗೆ ಚರ್ಚೆ ಮಾಡಿ ಸರಿಪಡಿಸಲಿಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಗೋವಾ ರಾಜ್ಯದ ಬಗ್ಗೆ .....

ಶ್ರೀ ಹೆಚ್.ಸಿ. ಬಾಲಕೃಷ್ಣ : ಗೋಮಾಳದ ವಿಚಾರದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದಿರಿ. ಬಹಳ ಗಂಭೀರವಾದಂಥ ವಿಚಾರವದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸಾರ್, ನಾನು ಗೋವಾ ರಾಜ್ಯದ ಬಗ್ಗೆ ತಮ್ಮ ಗಮನ ಸೆಳೆಯುತ್ತಿದ್ದೆ.

ಅಧ್ಯಕ್ಷರು : ಗೋವಾದ ಬಗ್ಗೆ ಬಹಳ ಪ್ರೀತಿ ಇದೆ ಅದಕ್ಕೆ ಎತ್ತಿದರು.

ಶ್ರೀ ಧರ್ಮಸಿಂಗ್ : ಸಭಾಧ್ಯಕ್ಷರೆ, ಸ್ವಲ್ಪ ಅವಕಾಶ ಕೊಡಿ. ಗಲಾಟೆ ಮಾಡುವುದು ಬೇಡಿ.

ಅಧ್ಯಕ್ಷರು : ಅದೇನು ಹೇಳಿ.

(ಆ) ವಿಷಯ: ಭಟ್ಕಳದ ಗಲಭೆ ಬಗ್ಗೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸ್ವಲ್ಪ ಅವಕಾಶ ಕೊಡಿ, ಗಲಾಟೆಗೆ ಅವಕಾಶ ಕೊಡಬೇಡಿ, ಪ್ರಮುಖವಾದ ವಿಚಾರಗಳನ್ನು ಹೇಳಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋದಾಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಮೊಟ್ಟಮೊದಲನೇಯದಾಗಿ ಭಟ್ಕಳದಲ್ಲಿ ಆದಂಥ ಗಲಭೆಗಳ ಬಗ್ಗೆ ಶ್ರೀಮಾನ್ ದೇಶಪಾಂಡೆಯವರು ಪ್ರಸ್ತಾಪ ಮಾಡಿದರು ನಾನು ಭಾಗವಹಿಸಿದ್ದೆ, ಮಾನ್ಯ ಖರ್ಗೆಯವರು ಕೂಡ ಹೇಳಿದ್ದಾರೆ ಹಾಗೂ ಇತರೆ ವಿರೋಧ ಪಕ್ಷದ ಸದಸ್ಯರು ಕೂಡ ಪ್ರಸ್ತಾಪ ಮಾಡಿದ್ದಾರೆ. ಅವರೇನು ಹೇಳಿದ್ದಾರೆಂದರೆ, ಮುಖ್ಯಮಂತ್ರಿಗಳು ಇರುವುದಿಲ್ಲ ದೆಹಲಿಗೆ ಹೋಗುತ್ತಾರೆ, ಉಪ ಮುಖ್ಯಮಂತ್ರಿಗಳು ಇರುತ್ತಾರೆ ಎಂದರು. ನಾವು ಏನು ಹೇಳಿದೆವು, ಯಾರಾದರೂ ಕೂಡ ಸರ್ಕಾರದ ಪರವಾಗಿ ಉತ್ತರ ಕೊಡತಕ್ಕಂಥ ಹಕ್ಕು ಇದೆ. ಅದರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ತಾವು ಏನು ಹೇಳಿದ್ದೀರಿ, ತಾವೊಂದು ರೀತಿ ಹೇಳಿಕೆ ಅಲ್ಲಿ ಕೊಟ್ಟಿದ್ದೀರಿ, ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ರೀತಿ ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೆ ಖುದ್ದಾಗಿ ಮುಖ್ಯ ಮಂತ್ರಿಗಳು ಬಂದು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ನಾವು ಕೇಳಿದ್ದೇವೆ. ಭಟ್ಕಳದಲ್ಲಿ ಗಲಭೆಯಾಯಿತು, ತಾವು ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ. ಗೃಹ ಇಲಾಖೆ ತಮ್ಮ ಅಧೀನದಲ್ಲಿ ಇದೆ, ತಾವು ಸದನದಲ್ಲಿ ಬಂದು ಭಟ್ಕಳದ ವಿಚಾರದ ಬಗ್ಗೆ ಒಂದು ಸ್ಪಷ್ಟೀಕರಣ ಹೇಳಿಕೆ ಕೊಡಬೇಕಾಗಿತ್ತು, ಕೊಡಲಿಲ್ಲ. ತದ ನಂತರ ತಾವು ಏನು ಹೇಳಿದಿರಿ, ಉಪ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ ಐಎಸ್ಐರವರ ಕೈವಾಡ ಇದೆ, ಈ ತರಹದ ಹೇಳಿಕೆಯನ್ನು ರಾಜ್ಯದ ಉಪ ಮುಖ್ಯಮಂತ್ರಿಗಳು ಕೊಡಬಾರದು. ಅಲ್ಲಿ ಸರಿಯಾದ ರೀತಿಯಲ್ಲಿ ವರದಿ ತರಿಸಿ ಜವಬ್ದಾರಿಯುತವಾದಂಥ ಹೇಳಿಕೆ ಕೊಡಬೇಕು. ತಾವು ಏನು ಹೇಳಿದಿರಿ, "ಕೆಲವು ಭ್ರಷ್ಟ ರಾಜಕಾರಣಿಗಳ ಕೈವಾಡ ಇದೆ". ತಾವು ಸ್ಪಷ್ಟಪಡಿಸಬೇಕು, ಯಾರು ಯಾವ ಪಕ್ಷಕ್ಕೆ ಸಂಬಂಧಪಟ್ಟಿರುವವರು? ಯಾರ ಕೈವಾಡ ಇದೆ? ತಾವು ಇನ್ನೂ ಹೋಗಿಲ್ಲ ಇವತ್ತು ಹೋಗಬೇಕಾಗಿತ್ತು. ಸದನ ಇರುವುದರಿಂದ ತಾವು ಹೋಗಲಿಲ್ಲ. ಅದು ತಮಗೆ ಬಿಟ್ಟಿದ್ದು. ಅಲ್ಲಿ ಆಚಾರ್ಯರವರಿಗೆ ಅವರು ಉಸ್ತುವಾರಿ ಸಚಿವರು ಇದ್ದಾರೆ, ಆಚಾರ್ಯರವರು ಉಡುಪಿ ಬಂದ್ ಮಾಡುತ್ತಾರೆ ಮತ್ತು ಅಲ್ಲಿ ಶಾಂತಿಸ್ಥಾಪನೆಗೆ ಅಲ್ಲಿಗೆ ಹೋಗುತ್ತಾರೆ. ರಾಜ್ಯದ ಜನತೆಗೆ ಸ್ಪಷ್ಟವಾದಂಥ ಅಲ್ಲಿ ಏನು ಆಗುತ್ತಿದೆ ಎಂಬ ಬಗ್ಗೆ ಸ್ಪಷ್ಟವಾದ ಚಿತ್ರಣ ಇಲ್ಲಾ. ಇವತ್ತು ತಾವು ಮತ್ತು ಸಂಘ ಪರಿವಾರದವರು ಕೂಡಿ ಈ ರಾಜ್ಯದಲ್ಲಿ ಆಡಳಿತ